ಸದಸ್ಯರ ಫೋಟೋಗಳಿವೆ. ಫೋಟೊದ ಜೊತೆಗೆ ಅದರಲ್ಲಿ ಇರುವವರು ಯಾರೆನ್ನುವ ವಿವರವೂ ಇದೆ. ಸ್ವತಃ ಶಾಸ್ತ್ರಿಗಳ ಫೋಟೊದ ಮೇಲೆ 'ನಾನು, ಅಪ್ಪ' ಎನ್ನುವ ವಿವರವಿದೆ. ಮರೆವಿನಿಂದ ಬಳಲುವ ಈ ಅಜ್ಜನೊಂದಿಗೆ ಏಗುವುದು ಮಗಳ ಕುಟುಂಬಕ್ಕೆ ಕಷ್ಟವಾಗಿದೆ. ಮೊಮ್ಮಗಳ ನಾಜೂಕುತನಕ್ಕೂ ಅಜ್ಜನಿಗೂ ಹೊಂದಾಣಿಕೆಯಾಗುತ್ತಿಲ್ಲ. ಕೊನೆಗೆ, ಊರಿನಿಂದ ಕರೆಸಿಕೊಂಡ ತರುಣನೊಬ್ಬನಿಗೆ ಅಪ್ಪನ ಯೋಗಕ್ಷೇಮ ವಹಿಸಿ ಮಗಳು ನಿರಾಳವಾಗುತ್ತಾಳೆ. ಆ ಹುಡುಗ ಪರೀಕ್ಷೆ ಬರೆಯಬೇಕಾದ ಸಂದರ್ಭದಲ್ಲಿ – ಒಂದು ದಿನದ ಮಟ್ಟಿಗೆ ಅಪ್ಪನನ್ನು ನೋಡಿಕೊಳ್ಳುವ ಅನಿವಾರ್ಯತೆ ಮಗಳಿಗೆ ಎದುರಾಗುತ್ತದೆ. ತನ್ನ ಮಗಳಿಗಾಗಿ ಬಟ್ಟೆ ಖರೀದಿಸಲು ಮಾರುಕಟ್ಟೆಗೆ ಹೋಗುವ ಅವಳು, ಶಾಸ್ತ್ರಿಗಳನ್ನೂ ಜೊತೆಗೆ ಕರೆದುಕೊಂಡು ಹೋಗುತ್ತಾಳೆ. ಕಾರಿನಲ್ಲಿ ಅಪ್ಪನನ್ನು ಕೂರಿಸಿ ಮಗಳು ವ್ಯಾಪಾರದಲ್ಲಿ ತೊಡಗುತ್ತಾಳೆ.

ಕಾರಿನಲ್ಲಿ ಕುಳಿತ ಶಾಸ್ತ್ರಿಗಳನ್ನು ದಾರಿಯಲ್ಲಿ ಹೋಗುವ ಆನೆಯೊಂದು ಆಕರ್ಷಿಸುತ್ತದೆ. ಬಹುಶಃ ಶಾಸ್ತ್ರಿಗಳಲ್ಲಿ ಬಾಲ್ಯ ಜಾಗೃತಗೊಂಡಿರಬೇಕು. ಕಿಂದರಜೋಗಿಯನ್ನು ಹಿಂಬಾಲಿಸಿದ ಚಿಣ್ಣರಂತೆ ಶಾಸ್ತ್ರಿಗಳು ಆನೆಗೆ ಮರುಳಾಗುತ್ತಾರೆ. ಆನೆಯ ಮೇಲೆ ಕೂರುವ ಆಸೆ ಪ್ರೊಫೆಸರರದು. ಆ ಎತ್ತರದಲ್ಲಿ ಕಾಳಿದಾಸನ 'ಮೇಘದೂತ' ಎಲ್ಲಿಯಾದರೂ ಕಾಣಬಹುದೆಂದು ಅವರ ಮನಸ್ಸು ಹಂಬಲಿಸಿರಲೂಬಹುದು. ಆ ಆಸೆಯೇ ಅವರು ತನ್ನ ಕುಟುಂಬದಿಂದ ದೂರವಾಗಲು ಕಾರಣವಾಗುತ್ತದೆ. ಆಸೆ ದುಃಖಕ್ಕೆ ಮೂಲವಲ್ಲವೇ?

ನೆನಪಿನ ಶಕ್ತಿಯನ್ನು ಕಳೆದುಕೊಂಡ ಹಿರಿಯ ನಾಗರಿಕರೊಬ್ಬರು ಮನೆಯಿಂದ ದೂರವಾಗುವುದು 'ಅಸ್ತು'ವಿನ ಕಥನದ ಪ್ರಮುಖ ಭಾಗ. ಈ ನಾಪತ್ತೆ ಪ್ರಕರಣ ಕಥೆಯ ಮುಖ್ಯ ಭಾಗವೂ ಹೌದು, ನೆಪ ಮಾತ್ರದ್ದೂ ಹೌದು. ಶಾಸ್ತ್ರಿಗಳು ಕುಟುಂಬದಿಂದ ತಪ್ಪಿಸಿಕೊಳ್ಳುವ ಪ್ರಸಂಗ – ಅಲ್ಜಮೈರ್ ಕಾಯಿಲೆಯ ಸ್ವರೂಪದ ಜೊತೆಗೆ, ಮರೆವಿನ ಸಮಸ್ಯೆಯಿಂದ ಬಳಲುತ್ತಿರುವವರ ಬಗ್ಗೆ ನಾವು ವಹಿಸಬೇಕಾದ ಎಚ್ಚರದ ಬಗ್ಗೆ ಹೇಳುತ್ತದೆ. ಇದೇ ಘಟನೆ, ಮಾನವೀಯತೆಯ ವಿವಿಧ ಮುಖಗಳು ಅನಾವರಣಗೊಳ್ಳಲೂ ನೆಪವಾಗುತ್ತದೆ. ಒಂದೆಡೆ, ಅಪ್ಪ ಕಾಣೆಯಾಗಲು ತನ್ನ ನಿರ್ಲಕ್ಷ್ಯವೇ ಕಾರಣ ಎನ್ನುವ ಪಾಪಪ್ರಜ್ಞೆ ಇರಾಳನ್ನು (ಮಗಳನ್ನು) ಕಾಡತೊಡಗುತ್ತದೆ. ಅಪ್ಪನ ಅನುಪಸ್ಥಿತಿಯಲ್ಲಿ ಅವಳಿಗೆ ಹಳೆಯ ನೆನಪುಗಳು ಮರುಕಳಿಸುತ್ತವೆ. ಆ ನೆನಪುಗಳ ಹಿನ್ನೆಲೆಯಲ್ಲಿ ಹೇಳುವುದಾದರೆ, ಅವಳು ಅಪ್ಪನನ್ನು ಕಳೆದುಕೊಂಡು ಬಹಳವೇ ಕಾಲವಾಗಿದೆ. ತನ್ನದೇ ಆದ ಪುಟ್ಟ ಕುಟುಂಬದ ನಿರ್ವಹಣೆಯ ಜವಾಬ್ದಾರಿಯಲ್ಲಿ ಸಿಲುಕಿದ ಅವಳಿಗೆ ಅಪ್ಪ ಅನೇಕ ಸಂದರ್ಭದಲ್ಲಿ ಭಾರವೆನಿಸಿದ್ದಿದೆ. ಅಜ್ಜ–ಮೊಮ್ಮಗಳ ಸಂಘರ್ಷದಲ್ಲಿ ಇರಾ ಮಗಳ ಪಕ್ಷವನ್ನೇ ವಹಿಸಿದ್ದಾಳೆ. ಅಪ್ಪನ ಸಂಬಂಧಗಳು, ವಿದ್ವತ್ತು ಕೂಡ ಆಕೆಯ ಅಸಹನೆಗೆ ಕಾರಣವಾಗಿದೆ. 'ಮೇಘದೂತ ನೆನಪಿರುತ್ತದೆ, ಮನೆಯ ವಿಳಾಸ ನೆನಪಿರುವುದಿಲ್ಲವೆ' ಎಂದು ಸಿಡುಕಿದ್ದಾಳೆ. ಹೀಗೆ, ಅಪ್ಪನನ್ನು ಮಾನಸಿಕವಾಗಿ ಕಳೆದುಕೊಂಡಿದ್ದ ಇರಾ, ಇದೀಗ ಭೌತಿಕವಾಗಿಯೂ ತಂದೆಯಿಂದ ದೂರವಾಗಿದ್ದಾಳೆ. ಭೌತಿಕವಾಗಿ ದೂರದಲ್ಲಿರುವ ಅಪ್ಪ ಮಾನಸಿಕ ರೂಪದಲ್ಲಿ ಮಗಳಿಗೆ ದಕ್ಕುವ ವೈರುಧ್ಯ ಇಲ್ಲಿಯದು.

ಭಕ್ತಿಯ ಕಾವಿಗೆ ದೇವರು ಒಲಿದು ಭಕ್ತರ ಕೋರಿಕೆಗಳಿಗೆ – 'ಅಸ್ತು', 'ತಥಾಸ್ತು' ಎನ್ನುವ ದೃಶ್ಯಗಳು ಪೌರಾಣಿಕ ಸಿನಿಮಾಗಳಲ್ಲಿ ಸಾಮಾನ್ಯ. ಅಲ್ಲಿ ಕೂಡ ಆಸೆಗಳದೇ ಮೆರವಣಿಗೆ. ಆ ಆಸೆಗಳ ಈಡೇರಿಕೆಯ ದಾರಿಯಲ್ಲಿ ಮಾನವೀಯತೆ ತೆಳುವಾಗುತ್ತದೆ. 'ಅಸ್ತು' ಹೇಳುವುದು